2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**115/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - | K.H. D' Souza | ಪಿಡಬ್ಲ್ಯೂ - 2 |
| ತಂದೆಯ ಹೆಸರು | - | John D' Souza | ಸಿಡಬ್ಲ್ಯೂ - 2 |
| ವಯಸ್ಸು | - | 75 ವರ್ಷ | |
| ಉದ್ಯೋಗ | - | ಎಸ್ಟೇಟ್ ನಲ್ಲಿ ರೈಟರ್ ಕೆಲಸ | |
| ವಾಸ ಸ್ಥಳ | - | ಗಾಂಧಿನಗರ, ಚಿಕ್ಕಮಗಳೂರು | |

ದಿನಾಂಕಃ 21-11-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ಫ್ರಾಸಾ.1 ಇವರನ್ನು ನಾನು ನೋಡಿರುತ್ತೇನೆ. ಅಂದಾಜು 2 ವರ್ಷಗಳ ಹಿಂದೆ ಸುಮಾರು ಸಂಜೆ 7.00 ಗಂಟೆಗೆ 3 ನೇ ಆರೋಪಿಯಾದ ಹುಚ್ಚೆಗೌಡರ ಮನೆಯ ಹತ್ತಿರ ಅವರ ಗೇಟಿನ ಮುಂಬಾಗದ ಜಾಗದಲ್ಲಿ ಸಿ.ಪಿ.ಐ ರವರು ನನ್ನನ್ನು ಮತ್ತು ಚಾಸಾ.3 ರವರನ್ನು ಕರೆಯಿಸಿ ಅಲ್ಲಿ ಒಂದು ದಾಖಲೆಯ ಮೇಲೆ ನಮ್ಮ ಸಹಿಯನ್ನು ತೆಗೆದುಕೊಂಡರು ಮತ್ತು ಅದೇ ಸ್ಥಳದಲ್ಲಿ ನಮ್ಮನ್ನು ನಿಲ್ಲಿಸಿಕೊಂಡು ಫೋಟೋಗಳನ್ನು ತೆಗೆದಿರುತ್ತಾರೆ. ಆ ಸಮಯದಲ್ಲಿ ಫ್ರಾಸಾ.1 ರವರು ನಮ್ಮ ಜೊತೆಯಲ್ಲಿ ಹಾಜರಿದ್ದರು. ಸದರಿ ಸಾಕ್ಷಿಯು ಸಹಿ ಮಾಡಿದ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದೆ ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ನಾನು ನನ್ನ

ಸಹಿಯನ್ನು ಬರವಣಿಗೆ ಮಾಡಿದ ದಾಖಲೆಯ ಮೇಲೆ ಸಹಿ ಮಾಡಿರುತ್ತೇನೆ.

2. ಈಗ ತೋರಿಸುವ ನಿ.ಪಿ.3 ಮತ್ತು 4 ಪೋಟೋಗಳಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಅವುಗಳು 3 ನೇ ಆರೋಪಿಯ ಮನೆಯ ಮುಂಬಾಗದಲ್ಲಿ ತೆಗೆದ ಪೋಟೋಗಳು ಆಗಿರುತ್ತವೆ.

<u>ಪಾಟೀ ಸವಾಲು ಶ್ರೀ ವಿ.ಟಿ.ಟಿ. ವಕೀಲರಿಂದ – ಆರೋಪಿತರ ಪರವಾಗಿ</u>

3. ನಿ.ಪಿ.2 ಮಹಜರ್ ನಲ್ಲಿ ಪೊಲೀಸರು ಏನು ಬರವಣಿಗೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಯಾವ ವಿಚಾರಕ್ಕಾಗಿ ಸದರಿ ಮಹಜರ್ ನಲ್ಲಿ ಬರವಣಿಗೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ನಿ.ಪಿ.2 ಮಹಜರ್ ಗೆ ಪಂಚರಾಗಿ ಬರಲು ಪೊಲೀಸರು ನನಗೆ ಯಾವುದೇ ನೋಟೀಸ್ ನ್ನು ನೀಡಿರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.